ಇ) ಈ ಪರವಾನಗಿಗಳು ಪರಿಶಿಷ್ಟ ಜಾತಿ ಪರಿಶಿಷ್ಟ ವರ್ಗಗಳ, ಕೇರಿಗಳ, ದೇವಸ್ಥಾನಗಳ ಹಾಗೂ ಪಾಠಶಾಲೆಗಳ ಹತ್ತಿರ ಮಾರಾಟ ಮಾಡಲು ಅನುಮತಿ ನೀಡಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಈ) ಇವುಗಳನ್ನು ಸ್ಥಳಾಂತರಿಸಲು ಸರ್ಕಾರವು ಕೈಗೊಂಡಿರುವ ಕ್ರಮಗಳೇನು?

ಶ್ರೀ ಧರ್ಮಸಿಂಗ್ (ಗೃಹ ಮತ್ತು ಅಬಕಾರಿ ಸಚಿವರು):-

| ಅ) | 1990–91 | 1991–92 (ಫೆಬ್ರುವರಿ 92ವರೆಗೆ) |
|---|---|---|
| ಸಿಎಲ್-1 | 367 | 407 |
| ಸಿಎಲ್-2 | 3445 | 3652 |
| ಸಿಎಲ್-4 | 98 | 100 |
| ಸಿಎಲ್-7 | 59 | 62 |
| ಸಿಎಲ್-8 | 44 | 49 |
| ಸಿಎಲ್-9 | 2180 | 2724 |
| ಸಿಎಲ್-14 | 4 | 4 |
| ಆರ್‌ವಿಬಿ 1 | 84 | 203 |
| ವೈಟಾ. | 81 | 86 |
| ಒಟ್ಟು | 6462 | 7287 |

ಆ) ರೂ.15.35ಕೋಟಿ 1990–91ಕ್ಕೆ ಸಂಗ್ರಹವಾಗಿರುತ್ತೆ.

ರೂ.16.40ಕೋಟಿ 1991-92ಕ್ಕೆ (ಫೆಬ್ರುವರಿ 92 ವರೆಗೆ)

ಇ) - ಇಲ್ಲ -

ಈ) ಉದ್ಭವಿಸುವುದಿಲ್ಲ.

## ನೆಲಮಂಗಲ ತಾಲ್ಲೂಕಿನಲ್ಲಿ ನಡೆದ ದರೋಡೆ ಮತ್ತು ಸುಲಿಗೆಗಳು

335(147) ಆಂಜನಾಮೂರ್ತಿ (ನೆಲಮಂಗಲ):- ಮಾನ್ಯ ಗೃಹ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ;

ಅ) ನೆಲಮಂಗಲ ತಾಲ್ಲೂಕಿನಲ್ಲಿ ಕಳೆದ ಮೂರು ವರ್ಷಗಳಿಂದ ಅನೇಕ ಕಡೆ ದರೋಡೆ ಮತ್ತು ಸುಲಿಗೆಗಳು ನಡೆಯುತ್ತಿರುವುದು ಮತ್ತು ತಾಲ್ಲೂಕು ಠಾಣೆಗಳಲ್ಲಿ ಸಿಬ್ಬಂದಿ ವರ್ಗ ಬಹಳ ಕದಿಮೆ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೆ;

ಆ) ಹಾಗಿದ್ದಲ್ಲಿ ಹೆಚ್ಚಿನ ಸಿಬ್ಬಂದಿ ಮತ್ತು ಸಲಕರಣೆಗಳನ್ನು ಒದಗಿಸಲು ಸರ್ಕಾರ ಇನ್ನು ಮುಂದಾದರೂ ಕ್ರಮ ಕೈಗೊಳ್ಳುವುದೇ?

ಶ್ರೀ ಧರ್ಮಸಿಂಗ್ (ಗೃಹ ಮತ್ತು ಅಬಕಾರಿ ಸಚಿವರು):-

ಅ) ಸರ್ಕಾರದ ಗಮನಕ್ಕೆ ಬಂದಿದೆ. ಮೂರು ವರ್ಷಗಳಿಂದ ಈ ತಾಲ್ಲೂಕಿನಲ್ಲಿ ನಡೆದ ಪ್ರಕರಣಗಳು ಈ ಕೆಳಕಂಡಂತಿವೆ:-

| | ದರೋಡೆ ಅಥವಾ ಸುಲಿಗೆ | ವರ್ಷ | ದಾಖಲಾ ಗಿದ್ದು | ಪತ್ತೆಯಾ ದ್ದದ್ದು | ಆರೋಪಣೆ ಪಟ್ಟಿ ಸಲ್ಲಿಸಿದ್ದು | ವಿಚಾರಣೆ ಯಲ್ಲಿ ಇರುವುದು | ಪತ್ತೆ ಯಾಗದ್ದು |
|---|---|---|---|---|---|---|---|
| | 1 | 2 | 3 | 4 | 5 | 6 | 7 |
| ನೆಲಮಂಗಲ ತಾಲ್ಲೂಕು: | ದರೋಡೆ | 1989 | 4 | 4 | 3 | – | 1 |
| | ಸುಲಿಗೆ | | 4 | 2 | 1 | – | 3 |
| | ದರೋಡೆ | 1990 | – | -- | – | – | – |
| | ಸುಲಿಗೆ | | – | – | -- | – | – |
| | ದರೋಡೆ | 1991 | – | – | -- | – | – |
| | ಸುಲಿಗೆ | | 4 | 1 | 2 | 2 | – |
| | ದರೋಡೆ | 1992 | 2 | 2 | – | 2 | – |
| | ಸುಲಿಗೆ | | – | – | – | – | – |

ಅ) ಈ ವಿಷಯವು ಸರ್ಕಾರದ ಪರಿಶೀಲನೆಯಲ್ಲಿದೆ.

## ಗೃಹ ರಕ್ಷಕ ದಳದವರ ಸಂಖ್ಯೆ

337 (896) ಶ್ರೀ ಎಂ. ನಾರಾಯಣಸ್ವಾಮಿ (ಬೇತಮಂಗಲ):- ಮಾನ್ಯ ಬಂದೀಖಾನೆ ಮತ್ತು ಗೃಹ ರಕ್ಷಕ ದಳ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದಲ್ಲಿ ಕಾರ್ಯನಿರ್ವಹಿಸುತ್ತಿರುವ ಗೃಹ ರಕ್ಷಕ ದಳದವರ ಸಂಖ್ಯೆ ಎಷ್ಟು?

ಆ) ಇವರಲ್ಲಿ ಖಾಯಂ ಹಾಗೂ ಹಂಗಾಮಿ ನೌಕರರ ಸಂಖ್ಯೆ ಎಷ್ಟು?

ಇ) ಖಾಯಂ ಆದವರಿಗೆ ಸರ್ಕಾರದಿಂದ ಸಿಗುವ ವೇತನ ಮತ್ತು ಸವಲತ್ತುಗಳಾವುವು?

ಈ) ಹಂಗಾಮಿಯವರಿಗೆ ನೀಡುವ ವೇತನ ಎಷ್ಟು?

ಉ) ಗೃಹ ರಕ್ಷಕ ದಳದವರನ್ನು ಪೋಲೀಸ್ ಪೇದೆಗಳೆಂದು ಪರಿಗಣಿಸಲು ಸರ್ಕಾರವು ಕ್ರಮ ಕೈಗೊಳ್ಳುವುದೇ?

ಶ್ರೀ ಡಿ.ಕೆ. ಶಿವಕುಮಾರ್ (ರಾಜ್ಯ ಸಚಿವರು ಬಂದೀಖಾನೆ ಮತ್ತು ಗೃಹ ರಕ್ಷಕ ದಳ.):-

ಅ) 16274

ಆ) ಗೃಹ ರಕ್ಷಕರೆಲ್ಲರೂ ಸ್ವಯಂಸೇವಕರು

ಇ) ಉದ್ಭವಿಸುವುದಿಲ್ಲ

ಈ) ಉದ್ಭವಿಸುವುದಿಲ್ಲ

ಉ) ಇಲ್ಲ

## ರಾಜ್ಯದಲ್ಲಿರುವ ಖೈದಿಗಳ ಸಂಖ್ಯೆ

338 (897) ಶ್ರೀ ಎಂ. ನಾರಾಯಣಸ್ವಾಮಿ (ಬೇತಮಂಗಲ):- ಮಾನ್ಯ ಬಂದೀಖಾನೆ ಮತ್ತು ಗೃಹ ರಕ್ಷಕ ದಳ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದಲ್ಲಿರುವ ಖೈದಿಗಳ ಸಂಖ್ಯೆ ಎಷ್ಟು?